


International Journal of Kannada Research
www.kannadajournal.com

**ISSN: 2454–5813**
IJSR 2017; 3(1): 47-48
© 2017 IJKS
www.kannadajournal.com
Received: 10-11-2016
Accepted: 11-12-2016

**ಶ್ರೀ ಶಂಕರ ಎಸ್ ಕೋಳಿ**
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯನ ಸಂಸ್ಥೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ

**ಡಾ. ಅಶೋಕ ನರೋಡೆ**
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯನ ಸಂಸ್ಥೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ

**Correspondence**
**ಶ್ರೀ ಶಂಕರ ಎಸ್ ಕೋಳಿ**
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯನ ಸಂಸ್ಥೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ

# ಆಧುನಿಕ ಕಾಲದಲ್ಲಿ ಮಾನವನ ಸಂಬಂಧಗಳು ಮತ್ತು ಕಳೆದುಕೊಳ್ಳುವಿಕೆ

**ಶ್ರೀ ಶಂಕರ ಎಸ್ ಕೋಳಿ, ಡಾ. ಅಶೋಕ ನರೋಡೆ**

ಪ್ರಾಚೀನ ಕಾಲದ ಆದಿ ಮಾನವನ ಹುಟ್ಟು ವಿಕಾಸ ಕ್ರಮವನ್ನು ಅಧ್ಯಯನ ಮಾಡಿದಾಗ ಹಾಗೂ ಆಧುನಿಕ ಬುದ್ಧಿವಂತ ಮಾನವನ ವಿಕಾಸದ ಹಾದಿಗಳನ್ನು ಅವಲೋಕಿಸಿದಾಗ ತಿಳಿದುಬರುವ ಮಾನವನ ಸಂಬಂಧಗಳ ಮೌಲ್ಯಗಳ ಅಂಶಗಳನ್ನು ತಿಳಿಯಬಹುದು. ಅಂದು ಆದಿಮಾನವ ಬುದ್ಧಿವಂತ ಇರದಿದ್ದರು ನಾನು ನಮ್ಮವರು ಎನ್ನುವ ಭಾವನೆ ಹೊಂದಿದ್ದ. ಭಾಷೆ, ವಸತಿ, ಆಹಾರ ಇರದಿದ್ದರು ಗುಹೆಗಳಲ್ಲಿ, ಗಿಡಗಳ ಪೊದೆಯಲ್ಲಿ ಕೂಡಿ ಬಾಳುವ ಹಂಬಲ ಹೊಂದಿದ್ದ ಆತ ಯಾವಾಗಲು ತಮ್ಮ ಸುತ್ತ ಮೂತ್ತಲಿನ ಸಂಬಂಧಗಳನ್ನು ಉಳಸಿಕೊಳ್ಳು ಯಾವಾಗಲೂ ಹಾತೋರೆಯುತ್ತಿದ್ದ. ಆದರೆ ಅದೇ ಇವತ್ತಿನ ಆಧುನಿಕ ಮಾನವ ತನ್ನ ಬುದ್ಧಿವಂತಿಕೆ ಹೆಚ್ಚಾದಂದೆ, ಅಕ್ಷರ ಜ್ಞಾನ, ತಾಂತ್ರಿಕ ಜ್ಞಾನ, ವಿಜ್ಞಾನ ಬೆಳೆದಂತೆ ಮಾನವನ ಸಂಬಂಧಗಳ ಬೇಲೆ ತಿಳಿಯಲು ಮರೆತು ಹೋಗಿದ್ದಾನೆ. ಇದಕ್ಕೆ ಕಾರಣ ಅತಿಯಾದ ಆಸೆ, ಸ್ವಾರ್ಥ, ಅಜ್ಞಾನ, ಅತಿಯಾದ ಹಣ, ಅಹಂಕಾರ, ಕಾಮ, ಕ್ರೋದ, ಮೋಹ, ಮದ, ಮತ್ಸರ ಈ ಅಂಶಗಳಿಂದ ಸುಂದರವಾದ ತನ್ನ ಬದುಕಿನ ಸಂಬಂಧಗಳನ್ನು ಇವತ್ತು ಕಳೆದುಕೊಳ್ಳುತ್ತಿದ್ದಾನೆ. ಆದರಿಂದ ಈ ಲೇಖನದಲ್ಲಿ ಆಧುನಿಕ ಮಾನವ ತನ್ನ ಸಂಬಂಧಗಳನ್ನು ಉಳಿಸಿಕೊಳ್ಳುವ ಮತ್ತು ಕಳೆದುಕ್ಕೊಳ್ಳುವ ಮೋಹಭಾವದ ಅಂಶಗಳನ್ನು ಚರ್ಚಿಸಲಾಗಿದೆ. ಮನುಷ್ಯನ ಜೀವನದಲ್ಲಿ ಹುಟ್ಟಿನಿಂದಲೇ ಪ್ರಾರಂಭವಾಗುವ ಸಂಬಂಧಗಳ ಬಂಧನ ಸಾವಿನ ಅಂತ್ಯದವರೆಗೂ ನಿರಂತರವಾಗಿ ಸಾಗುತ್ತಲೇ ಇರುತ್ತದೆ. ಅಂದರೆ ಇದೊಂದು ನಿರಂತರವಾದ ಪ್ರಕ್ರೀಯೆ ಆಗಿದೆ. ಈ ಮಾನವನ ಸಂಬಂಧಗಳು ಯಾವವು ಶಾಶ್ವತವಲ್ಲ. ಆ ಸಂಬಂಧಗಳು ನಮ್ಮಿಂದ ಒಂದಲ್ಲಾ ಒಂದು ದಿನ ದೂರವಾಗಿಯೇ ಆಗುವವು. ಇಲ್ಲವಾದರೆ ನಾವೇ ಅವುಗಳಿಂದ ದೂರವಾಗುವ ಸಂದರ್ಭಗಳು ಬರುವವು. ಯಾಕೆಂದರೆ ಇದು ಆಧುನಿಕ ಯುಗ ಇಲ್ಲಿ ಅತಿಯಾದ ಆಸೆ, ಸ್ವಾರ್ಥ, ಅಜ್ಞಾನ, ಶ್ರೀಮಂತಿಕೆ, ಅಹಂಕಾರ, ಕಾಮ, ಕ್ರೋದ, ಮೋಹ, ಮದ, ಮತ್ಸರಗಳಿಂದ ಈ ಅಂಶಗಳಿಗೆ ಬೆಲೆ ಕೊಡುವುದರಿಂದ ಪ್ರೀತಿಯಿಂದ ಇದ್ದ ಸಂಬಂಧಗಳು ಕಳೆದು ಹೋಗುತ್ತವೆ. ಈ ಕಳೆದು ಹೋದ ಸಂಬಂಧದ ಕುರಿತು ಆಲೋಚಿಸಿ, ಚಿಂತಿಸಿ ಫಲವಿಲ್ಲ. ಅದು ಮತ್ತೆ ಒಂದಾಗುವ ಸಾಧ್ಯತೆ ತುಂಬಾ ಅಪರೂಪ.

ಬಹಳಷ್ಟು ಸಂದರ್ಭಗಳಲ್ಲಿ ಸಂಬಂಧಗಳನ್ನು ಉಳಿಸಿಕೊಳ್ಳಲು ಸಾಧ್ಯವೇ ಇಲ್ಲ ಎಂದು ಹೇಳಬಹುದು. ಅಪರೂಪದ ಕೆಲವೇ ಕೇಲವು ಸಂದರ್ಭಗಳು ಒಂದಾಗುವ, ಮತ್ತೆ ಕೂಡಿ ಬಾಳುವ ಸಮಯ ಬರಬಹುದು. ಇದು ಹೀಗಾಗಲು ಎರಡು ಕಡೆ ಇರುವ ಮನಸ್ಸುಗಳು ಸುಜ್ಞಾನಿಗಳು, ತ್ಯಾಗದ ಮನೋಭಾವದವರು, ಜೀವನದ ಕ್ಷಣಿಕತೆಯ ಮರ್ಮವನ್ನು ಕುರಿತು ತಿಳುವಳಿಕೆ ಹೊಂದಿದವರು ಆಗಿದ್ದಾಗ ಮಾತ್ರ ಮತ್ತೆ ಸಂಬಂಧ ಗಟ್ಟಿಗೊಳ್ಳಲು ಸಾಧ್ಯ. ಹೀಗಿರುವ ಜನ ತುಂಬಾ ಕಡಿಮೆ. ಈಗಿನ ಆಧುನಿಕ ಮಾನವರಲ್ಲಿ 'ನಾನು' ಎನ್ನುವ ಅಹಂಕಾರ ಮನೆ ಮಾಡಿಬಿಟ್ಟಿದೆ.

ಆದ್ದರಿಂದ ಎಲ್ಲ ಇವತ್ತಿನ ಜನರು ಮಾನವನ ಸಂಬಂಧಗಳ ಪವಿತ್ರತೆ, ಅವುಗಳ ಶ್ರೇಷ್ಠತೆಯ ಅರಿವಿನಿಂದ ದೂರವಾಗಿಯೆ ಬಾಳುತ್ತಿರುವರು. ಎಲ್ಲರಿಗೂ ತಮ್ಮ ಅಹಂಕಾರವೇ ಹೆಚ್ಚು. ಇದರ ಮುಂದೆ ಎಲ್ಲ ಮಾನವೀಯ ಸಂಬಂಧಗಳು ನಗಣ್ಯ. ಇಂಥ ಅಜ್ಞಾನ, ಅಂಧಕಾರ ತುಂಬಿದ ಜನರು ಅಮೂಲ್ಯವಾದ ಮಾನವಿಯ ಸಂಬಂಧಗಳನ್ನು ಕಳೆದು ಕೊಂಡು ಅನಾಥರಂತೆ ಬದುಕುವ ಸ್ಥಿತಿಯನ್ನು ತಮಗೆ ತಾವೇ ತಂದು ಕೊಂಡು ನೆಮ್ಮದಿಯಿಲ್ಲದೆ ಸಮಾಜದಲ್ಲಿ ಬದುಕುತ್ತಿದ್ದಾರೆ.

ಅವರಿಗೆ ಸಂಬಂಧಗಳು ಇದ್ದಾಗ ಅದರ ಬೆಲೆ ಗೊತ್ತಾಗುವದಿಲ್ಲ. ಆ ಸಂಬಂಧಗಳನ್ನು ಕಳೆದುಕೊಂಡಾಗ ಅದರ ಬೇಲೆ ಕೊನೆಯ ಹಂತದಲ್ಲಿ ಗೊತ್ತಾಗುತ್ತದೆ.

ಸಂಬಂಧದ ಅತ್ಯಮೂಲ್ಯತೆಯ ತಿಳುವಳಿಕೆ ಇಲ್ಲದೆ ಅದನ್ನು ಕಳೆದುಕೊಳ್ಳುವ ಅಜ್ಞಾನಿಗಳು ಮಾಡುವ ಅವಾಂತರದಿಂದ ಮತ್ತೊಬ್ಬರಿಗೂ ತೊಂದರೆಯಾಗುವುದು. ಅವರು ಆ ಸಂಬಂಧದ ಕುರಿತು ಅಪಾರ ಪ್ರೀತಿಯನ್ನು ಹೊಂದಿರುವರು. ಆ ಸಂಬಂಧವೇ ಅವರಿಗೆ ಸರ್ವಸ್ವವಾಗಿರುವುದು. ಹಾಗಾಗಿ ಅವರು ಸಂಬಂಧವನ್ನು ಪವಿತ್ರವೆಂದು ಭಾವಿಸಿ ಕೊನೆಯತನಕ ಕಾಪಾಡಿಕೊಳ್ಳಲು ಬಯಸುವರು.

ಆದರೆ ಇಂದಿನ ಆಧುನಿಕ ಮಾನವರ ಅಹಂಕಾರದ ಪರದೆ ಆವರಿಸುವ ಅವಿವೇಕಿಗಳಿಗೆ ಇದು ತಿಳಿಯುವದಿಲ್ಲ. ಅವರು ಮಾತ್ರ ತಮ್ಮ ಮನಸ್ಸಿಗೆ ಬಂದಂತೆ ವರ್ತಿಸುತ್ತ ಸರಿ–ತಪ್ಪುಗಳ ಕುರಿತು ಆಲೋಚನೆಯನ್ನು ಮಾಡದೆ ತರಾತುರಿಯಲ್ಲಿ ನಿರ್ಧಾರ ಕೈಗೊಂಡು ಸಂಬಂಧಕ್ಕೆ ತಿಲಾಂಜಲಿಯಿತ್ತೇ ಬಿಡುವರು. ಅವರಿಗೇನೋ ಅಹಂಕಾರದ ಮತ್ತಿನಲ್ಲಿ ತಮ್ಮ ತಪ್ಪು ನಡುವಳಿಕೆಯ ಅರ್ಥ ಆಗುವುದೇ ಇಲ್ಲ.

ಇತ್ತ ಇನ್ನೊಬ್ಬರು ತಮ್ಮ ಅತ್ಯಂತ ಶ್ರೇಷ್ಠ ಸಂಬಂಧ ಕಳೆದುಕೊಂಡಿದ್ದರ ಕುರಿತು ಅಪಾರ ನೋವನ್ನು ದುಃಖವನ್ನು ಹೊಂದುವರು. ಅವರು ಕಳಚಿ ಹೋದ ಸಂಬಂಧದ ಕುರಿತು ಚಿಂತಿಸುತ್ತ ತಮ್ಮ ಜೀವನದ ನೆಮ್ಮದಿಯನ್ನೇ ಕಳೆದುಕೊಳ್ಳುವರು. ಇವರಿಗೆ ತಾವು ಅಷ್ಟೊಂದು ಪ್ರಾಮಾಣಿಕವಾಗಿ ಸತ್ಯ, ನ್ಯಾಯ, ನೀತಿ, ಧರ್ಮದಿಂದ ಕಾಪಾಡಿಕೊಂಡು ಬಂದ ಸಂಬಂಧ ಕಳಚಿ ಹೋಗಿರುವುದು ಅತೀ ಸಂಕಟದ ಸಂಗತಿಯಾಗಿರುವುದು.

ಈ ರೀತಿ ಆದರೂ ಏನು ಮಾಡದ ಅಸಾಯಕ ಸ್ಥಿತಿ ಅವರದಾಗಿರುವುದು. ಅನ್ಯಾಯವಾಗಿ ಅವರಿಗೆ ಇಂಥ ಸ್ಥಿತಿ ಒದಗಿ ಬರುವುದು. ಇಲ್ಲಿ ನ್ಯಾಯ ಎಲ್ಲಿ ಹುಡುಕುವುದು? ಎಂದು ತಿಳಿಯುವುದೇ ಇಲ್ಲ. ಆದ ಅನ್ಯಾಯವನ್ನು ಎದುರಿಸುತ್ತ ಇರುವ ಕೆಲಸವೊಂದೇ ಉಳಿಯುವುದು. ಈ ಸತ್ಯವನ್ನು ಅರಿತು ಹೀಗೆ ಅನ್ಯಾಯಕ್ಕೆ ಒಳಪಟ್ಟು ತಾವು ಅತಿಯಾಗಿ ಪ್ರೀತಿಯಿಟ್ಟ ಸಂಬಂಧ ತಮ್ಮಿಂದ ಕಳೆದು ಹೋದಾಗ ಧೈರ್ಯದಿಂದ ವರ್ತಿಸಬೇಕು. ಅನ್ಯಾಯವಾಗಿ ಕಳೆದು ಹೋದ ಸಂಬಂಧ ಮತ್ತೆ ಮರಳುವ ಆಶೆ ಬಿಟ್ಟು, ಅದರ ಚಿಂತೆಯಲ್ಲಿ ಕೊರಗದೆ ಆತ್ಮ ವಿಶ್ವಾಸದಿಂದ ಬದುಕಿ ಬಾಳಬೇಕು. ನಮ್ಮಿಂದ ಸಂಬಂಧ ಕಳಚಿಕೊಂಡವರ ಅವಿವೇಕಕ್ಕಾಗಿ ನಾವು ಚಿಂತಿಸಿ ಫಲವಿಲ್ಲ. ಅವರ ಅಜ್ಞಾನ, ಅಹಂಕಾರ ಮಾಡಿದ ಅನಾಹುತಕ್ಕೆ ನಾವು ವ್ಯಥೆ ಪಡುವ ಅಗತ್ಯವಿಲ್ಲ.

ನಾವು ಪರಿಶುದ್ಧರಾಗಿದ್ದು, ನಮ್ಮ ನಡೆ ನುಡಿ ಪ್ರಾಮಾಣಿಕವಾಗಿದ್ದು, ನಮ್ಮ ಹೃದಯ ನಿರ್ಮಲ ಪ್ರೇಮದಿಂದ ಕೂಡಿದ್ದಾದರೆ ನಮಗಾವ ಭಯವಿಲ್ಲ. ನಾವು ಯೋಚಿಸುವುದು ಬೇಡ. ನಮ್ಮ ಸತ್ಯ ಶುದ್ಧತೆಯ ಮೇಲೆ ನಮಗೆ ನಂಬಿಕೆ ಇರಲಿ. ನಮ್ಮ ಸದಾಚಾರ ಸನ್ನಡತೆ ನಮ್ಮನ್ನು ಕಾಪಾಡುವವು. ಅವು ನಮ್ಮ ಮನೋಬಲ ಹೆಚ್ಚಿಸುವವು.

ಆದ್ದರಿಂದ ನಾವು ನಮ್ಮ ಜೊತೆಯಿದ್ದ ಸಂಬಂಧ ಕಳೆದು ಹೋದ ಬಗ್ಗೆ ಆಲೋಚಿಸಿ ನೆಮ್ಮದಿ ಕಳೆದುಕಳ್ಳುವುದು ಬೇಡ. ಯಾವ ಸಂಬಂಧ ಕಳೆದು ಹೋಗಿದೆಯೋ ಅವರ ನಮ್ಮ ಜೋತೆಯಿರುವ ದಿನಗಳು ಅಷ್ಟೇ ಇದ್ದವು. ಎಂದು ತಿಳಿದುಕೊಂಡು ಈ ಸಂಬಂಧವನ್ನು ಮರೆತು ಮತ್ತೆ ನಮ್ಮ ಜೊತೆ ಇರುವ ಇನ್ನೂ ಅನೇಕ ಸಂಬಂಧಗಳತ್ತ ನೋಡಬೇಕು.

ಒಂದು ಸಂಬಂಧ ಕಳಚಿ ಹೋದರೆ ಏನಾಯಿತು? ಇರುವ ಇನ್ನುಳಿದ ಸಂಬಂಧಗಳೊಂದಿಗೆ ಸಂತಸದಿಂದ ಬಾಳುವುದನ್ನು ರೂಡಿಸಿಕೊಳ್ಳಬೇಕು. ಆಗ ಆ ಕಳೆದು ಹೋದ ಸಂಬಂಧ ಮರೆತು ಹೋಗುವುದು. ಇನ್ನೊಂದರೊಂದಿಗೆ ಆತ್ಮೀಯತೆ ಬೆಳೆದು ಆನಂದ ಹೊಂದುವೆವು. ಆಗ ನೆಮ್ಮದಿಯ ಜೀವನ ನಮ್ಮದಾಗುವುದು.

ಈ ರೀತಿ ನಾವೆಲ್ಲ ನಮ್ಮ ಜೀವನದಲ್ಲಿ ನಮ್ಮ ಅತ್ಯಂತ ಪ್ರೀತಿಯ ಯಾವುದೇ ಸಂಬಂಧ ನಮ್ಮಿಂದ ನಮಗೆ ವಿಶ್ವಾಸ ದ್ರೋಹ ಬಗೆದು ದೂರಾದಾಗ ದಃಖಿಸಬಾರದು. ಅಂತಹ ದ್ರೋಹಿಗಳನ್ನು ದೂರ ಮಾಡಿ ಬದುಕುವದನ್ನು ಕಲಿಯಬೇಕು. ಬದುಕು ಮತ್ತೆ ಸುಂದರವಾಗಿ ನಿರ್ಮಾಣಗೊಳ್ಳುವುದು. ನೆಮ್ಮದಿಯ ನೆಲೆಯಾಗುವುದು.